(ದಿನಾಂಕ: 11.07.2014ರಂದು ಸದನವು ಬೆಳಗ್ಗೆ 10 ಗಂಟೆ 17 ನಿಮಿಷಕ್ಕೆ ಸಮಾವೇಶಗೊಂಡಿತು. ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪನವರು ಪೀಠವನ್ನು ಅಲಂಕರಿಸಿದ್ದರು)

1. ಪ್ರಶ್ನೋತ್ತರ

ಅಧ್ಯಕ್ಷರು: ಈಗ ಪ್ರಶ್ನೋತ್ತರ.

ಶ್ರೀ ರಘುಮೂರ್ತಿ (ಸದನದಲ್ಲಿ ಹಾಜರಿರಲಿಲ್ಲ)

ರಾಷ್ಟ್ರೀಯ ತೋಟಗಾರಿಕಾ ಮಿಷನ್

212 (1580); ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ)

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ತೋಟಗಾರಿಕಾ ಇಲಾಖೆಯಲ್ಲಿ ರಾಷ್ಟ್ರೀಯ ತೋಟಗಾರಿಕಾ ಇಲಾಖೆಯಲ್ಲಿ ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಅನುದಾನ ಎಷ್ಟು;

ಆ) ಸದರಿ ಯೋಜನೆಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಖರ್ಚಾದ ಅನುದಾನ ಎಷ್ಟು; ಖರ್ಚಾಗದೇ ಉಳಿದಿರುವ ಅನುದಾನ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು);

ಇ) ಬಾಕಿ ಉಳಿದಿರುವ ಹಣದ ಬಗ್ಗೆ ಸರಕಾರ ಯಾವ ಕ್ರಮ ತೆಗೆದುಕೊಂಡಿರುತ್ತದೆ;

ಡಾ. ಶಾಮನೂರು ಶಿವಶಂಕರಪ್ಪ (ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು)

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ತೋಟಗಾರಿಕಾ ಇಲಾಖೆಯಲ್ಲಿ ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆಯಡಿಯಲ್ಲಿ 1379.62 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ.

ಆ) ಖರ್ಚಾದ ಅನುದಾನ ` 1302.26 ಲಕ್ಷಗಳು ಹಾಗೂ ಖರ್ಚಾಗದೇ ಉಳಿದಿರುವ ಅನುದಾನ ` 77.36 ಲಕ್ಷಗಳು. ತಾಲ್ಲೂಕುವಾರು ವಿವರ ಅನುಬಂಧದಲ್ಲಿ ನೀಡಿದೆ.

ಇ) ಆಯಾ ವರ್ಷಗಳಲ್ಲಿ ಬಾಕಿ ಉಳಿಕೆಯಾದ ಅನುದಾನವನ್ನು ಮುಂಬರುವ ಆರ್ಥಿಕ ವರ್ಷದ ಸಾಲಿಗೆ ಪ್ರಾರಂಭಿಕ ಶಿಲ್ಕಾಗಿ ಬಳಸಿಕೊಂಡು ಸದರಿ ಯೋಜನೆಯಡಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1580ರ ಉತ್ತರಿಸಬೇಕಾದ ದಿನಾಂಕ: 11.07.2014

ಉತ್ತರ ಕನ್ನಡ ಜಿಲ್ಲೆಯಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ

ಕಳೆದ ಮೂರು ವರ್ಷಗಳಿಂದ ಖರ್ಚಾದ ಹಾಗೂ ಖರ್ಚಾಗದೆ ಉಳಿದಿರುವ ಅನುದಾನದ ವಿವರ

ಕ್ರ ಸಂ.	ತಾಲ್ಲೂಕು	2011–12			2012–13			2013–14			ಬಿಡುಗಡೆಯಾದ ಒಟ್ಟು ಅನುದಾನ	ಖರ್ಚಾದ ಒಟ್ಟು ಅನುದಾನ	ಉಳಿಕೆಯಾದ ಒಟ್ಟು ಅನುದಾನ
		ಬಿಡುಗಡೆಯಾದ ಒಟ್ಟು ಅನುದಾನ	ಖರ್ಚಾದ ಒಟ್ಟು ಅನುದಾನ	ಉಳಿಕೆಯಾದ ಒಟ್ಟು ಅನುದಾನ	ಬಿಡುಗಡೆಯಾದ ಒಟ್ಟು ಅನುದಾನ	ಖರ್ಚಾದ ಒಟ್ಟು ಅನುದಾನ	ಉಳಿಕೆಯಾದ ಒಟ್ಟು ಅನುದಾನ	ಬಿಡುಗಡೆಯಾದ ಒಟ್ಟು ಅನುದಾನ	ಖರ್ಚಾದ ಒಟ್ಟು ಅನುದಾನ	ಉಳಿಕೆಯಾದ ಒಟ್ಟು ಅನುದಾನ			
1	ಕಾರವಾರ	5.21	5.21	0.00	3.70	3.63	0.07	2.70	2.47	0.23	11.61	11.61	0.30
2	ಅಂಕೋಲಾ	51.36	50.7	0.40	48.62	43.28	5.33	24.00	23.64	0.36	123.98	117.89	6.09
3	ಕುಮಟಾ	22.91	22.67	024	30.00	25.97	4.03	19.00	18.68	0.32	71.91	67.32	4.59
4	ಹೊನ್ನಾವರ	43.67	43.28	0.38	41.00	38.85	2.15	35.00	34.41	0.59	119.67	116.54	3.12
5	ಭಟ್ಕಳ	15.12	15.12	0.00	14.00	13.08	0.92	22.00	21.30	0.70	51.12	49.5	1.62

6	ಸಿದ್ದಾಪುರ	71.95	68.57	3.38	71.00	59.60	11.40	45.00	42.47	2.53	187.95	170.64	17.31
7	ಶಿರಸಿ	221.35	221.35	0.00	107.00	104.92	2.08	125.20	92.61	32.59	453.55	418.88	34.67
8	ಹಳಿಯಾಳ	18.47	18.47	0.00	9.62	9.60	0.00	9.76	9.76	0.00	37.85	37.85	0.00
9	ಮುಂಡಗೋಡ	71.17	70.97	0.21	55.15	55.15	0.00	32.00	31.03	0.97	158.32	157.15	1.18
10	ಯಲ್ಲಾಪುರ	47.01	43.91	3.10	44.12	40.62	6.50	45.00	43.37	1.63	136.13	127.9	8.23
11	ಜೋಯಿಡಾ	6.49	6.49	0.00	7.10	6.84	0.26	13.96	13.96	0.00	27.55	27.29	0.26
	ಒಟ್ಟು	**574.70**	**567.00**	**7.70**	**431.30**	**401.55**	**29.75**	**373.62**	**333.71**	**39.91**	**1379.62**	**1302.26**	**77.36**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1580

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ. 1580ನ್ನು ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರನ್ನು ಕೇಳಬಯಸುತ್ತೇನೆ.

ಡಾ: ಶಾಮನೂರು ಶಿವಶಂಕರಪ್ಪ (ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು): ಮಾನ್ಯ ಅಧ್ಯಕ್ಷತೆ, ಉತ್ತರವನ್ನು ಒದಗಿಸಲಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಉತ್ತರ ಕೊಟ್ಟಿದ್ದಾರೆ. ಇದರಲ್ಲಿ ಉಳಿಕೆಯಾಗದ ಒಟ್ಟು ಅನುದಾನ `77.36 ಲಕ್ಷವನ್ನು ಮುಂಬರುವ ಆರ್ಥಿಕ ಸಾಲಿಗೆ ಪ್ರಾರಂಭಿಕ ಶಿಲ್ಕಾಗಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ನಮಗೆ ಬರುತ್ತಿರುವಂಥ ಅನುದಾನವೇ ಬಹಳ ಕಡಿಮೆಯಾಗಿದೆ. ಹಾಗಾಗಿ, ಆಯಾ ವರ್ಷದಲ್ಲೇ ಖರ್ಚಾಗುವಂತೆ ತಾವೇನು ಕ್ರಮ ಕೈಗೊಳ್ಳುತ್ತೀರಿ? ಖರ್ಚಾಗದೆ ಉಳಿಯುವುದಕ್ಕೆ ಏನು ಕಾರಣ ಮತ್ತು ಅದನ್ನು ಖರ್ಚು ಮಾಡುವುದಕ್ಕೆ ಏನು ಅಗತ್ಯ ಕ್ರಮ ತೆಗೆದುಕೊಳ್ಳುತ್ತಿದ್ದೀರಿ?

ಡಾ: ಶಾಮನೂರು ಶಿವಶಂಕರಪ್ಪ: ಮಾನ್ಯ ಅಧ್ಯಕ್ಷರೆ, ತಮ್ಮ ಜಿಲ್ಲೆಯಿಂದ ಬಂದಿರುವ ಎಲ್ಲಾ ಯೋಜನೆಗಳಿಗೆ ಅನುದಾನವನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು: ಸಚಿವರೆ, ಕಾಗೇರಿಯವರು ಅದನ್ನು ಕೇಳಲಿಲ್ಲ. ಆಯಾ ವರ್ಷದ ಹಣವನ್ನು ಆಯಾ ವರ್ಷವೇ ಖರ್ಚು ಮಾಡುವುದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ? ಎಂದು ಹೇಳಿದ್ದಾರೆ.

ಡಾ: ಶಾಮನೂರು ಶಿವಶಂಕರಪ್ಪ: ಅರ್ಜಿಗಳು ಬಂದಿಲ್ಲ, ರೈತರು ಕೇಳಿಲ್ಲ, ಟ್ರಾಕ್ಟರ್ ಖರೀದಿ ಮಾಡುವವರಿಗೆ ಪೂರಾ ಕೊಟ್ಟಿದ್ದೇವೆ. ಬಾಕಿ ಏನೂ ಉಳಿದಿಲ್ಲ. ಒಟ್ಟು 36 ಐಟಂಗಳಿಗೆ ಅನುದಾನವನ್ನು ಕೊಡುತ್ತಿದ್ದೇವೆ. ಯಾವುದೇ ಅನುದಾನ ಬಂದರೂ ಸಹ ಬಾಕಿ ನಿಲ್ಲಿಸದಂತೆ ಖರ್ಚು ಮಾಡುತ್ತಿದ್ದೇವೆ.

ಅಧ್ಯಕ್ಷರು: ಈ ವರ್ಷದಲ್ಲಿ ಮಾಡುತ್ತೇವೆಂದು ಹೇಳಿ.

ಡಾ: ಶಾಮನೂರು ಶಿವಶಂಕರಪ್ಪ: ಆಗಲಿ, ಖರ್ಚು ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಅರ್ಜಿಗಳು ಬಂದಿಲ್ಲ ಎನ್ನುವುದನ್ನು ನಾವು ನೀವು ಒಪ್ಪಬಹುದೇ? ಅರ್ಜಿಗಳು ಬರುತ್ತಿವೆ. ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಡಾ: ಶಾಮನೂರು ಶಿವಶಂಕರಪ್ಪ: ನಿಮಗೆ ಇನ್ನೂ ಹೆಚ್ಚಿಗೆ ಬೇಕಾದರೂ ಕೇಳಿ ಕೊಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅನುದಾನ ಬೇಕು ಎಂದು ನಾವು ಕೇಳಿದ್ದೇವೆ. ಯಾಂತ್ರೀಕರಣಕ್ಕೆ, ಸಬ್ಸಿಡಿಗೆ ಇನ್ನೂ ಅನೇಕ ಯೋಜನೆಗಳಿಗೆ ಹಣ ಬೇಕು ಎಂದು ಕೇಳಿದ್ದೇವೆ.

ಅಧ್ಯಕ್ಷರು: ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಕೊಡುವುದಿಲ್ಲ.

ಅಧ್ಯಕ್ಷರು: ಕೊಡುತ್ತಾರೆ, ನೀವು ಪಡೆದುಕೊಳ್ಳಿ.

ಡಾ: ಶಾಮನೂರು ಶಿವಶಂಕರಪ್ಪ: ಇನ್ನೂ ಹೆಚ್ಚಿಗೆ ಬೇಕಾದರೂ ಕೊಡುತ್ತೇವೆ. ನೀವು ಯೋಚನೆ ಮಾಡಬೇಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಆದರೆ, ಆಯಾ ವರ್ಷದ ಅನುದಾನ ಆಯಾ ವರ್ಷವೇ ಖರ್ಚಾಗುವಂತೆ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಆಯಿತು, ಕ್ರಮ ತೆಗೆದುಕೊಳ್ಳುತ್ತಾರೆ.